ಈ ದಿನ ದಿನಾಂಕಃ25-07-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ</u>**

ಈ ದಾವೆಯನ್ನು ವಾದಿ 1 ಮತ್ತು 3 ನೇ ಪ್ರತಿವಾದಿಗಳ ವಿರುದ್ದ ಹೂಡಿರುತ್ತಾರೆ. ವಾದಿ ಬಂಡಿದಾರಿ ವಿಚಾರಾಗಿ ಈ ದಾವೆ ಹೂಡಿರುತ್ತಾರೆ, ಸದರಿ ಬಂಡಿದಾರಿ ನನಗೆ ಬುದ್ದಿ ಬಂದಾಗಿನಿಂದಲೂ ಮುಚ್ಚಿ ಹೋಗಿರುತ್ತದೆ. ಹಾಗಾಗಿ ಸರ್ವೆ ನಂ 13ರ ಹಿಡುವಳಿದಾರರು ಸರ್ವೆ ನಂ 5 ರ ಮೂಲಕ ಓಡಾಡುತ್ತಿದ್ದರು ಎಂದರೆ ಸಾಕ್ಷಿ ಸರ್ವೆ ನಂ 9ರ ಮೂಲಕವೂ ಓಡಾಡುತ್ತಿದ್ದರು ಎಂದು ನುಡಿಯುತ್ತಾರೆ, ಸರ್ವೆ ನಂ 9ರ ಜಮೀನು ಗದ್ದೆಯಾದ ಕಾರಣ ಮತ್ತು ಬಂಡಿದಾರಿ ಮುಚ್ಚಿ ಹೋದ ಕಾರಣ ಅದರಲ್ಲಿ ಓಡಾಡುವ ಪ್ರಶ್ನೆಯೇ ಇಲ್ಲ ಎಂದರೆ ಸಾಕ್ಷಿ ಸದರಿ ಜಮೀನಿನಲ್ಲಿ 3 ತಿಂಗಳು ಮಾತ್ರ ಬೆಳೆಯನ್ನು ಬೆಳೆಯುತ್ತಿದ್ದು ಸದರಿ ಬಂಡಿ ದಾರಿ ಮೂಲಕವೇ ಓಡಾಡುತ್ತಿದ್ದು ಎಂದು ನುಡಿಯುತ್ತಾರೆ.

ನೀರಾವರಿ ಜಮೀನಿನಲ್ಲಿ ವರ್ಷಕ್ಕೆ 2 ಬೆಳೆ ಬೆಳೆಯುತ್ತಾರೆ ಎಂದರೆ ಸರಿ. ಜಮೀನಿಗೆ ಬೆಳೆಹಾಕುವ ಮುನ್ನ ಮತ್ತು ಹಾಕಿದ ತರುವಾಯವೂ ಸಹ ಜಮೀನುಗಳಲ್ಲಿ ಕೃಷಿ ಕಾರ್ಯಗಳನ್ನು ಮುಂದುವರೆಸುತ್ತಾರೆ ಎಂದರೆ ಸರಿ. ಹಾಗಾಗಿ 2 ಬೆಳೆ ತೆಗೆಯಲು ಸದರಿ ಜಮೀನುಗಳಲ್ಲಿ ಗುಂಟೆ ಹೊಡೆಯಲು ಪೂರ್ತಿ 12 ತಿಂಗಳು ಸಹ ಕೆಲಸ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆರದು 8 ತಿಂಗಳು ಕೆಲಸವಿದ್ದು 4 ತಿಂಗಳು ಕೃಷಿ ವಿರಾಮ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಜಮೀನು ಸಹ ನೀರಾವರಿ ಜಮೀನು ಎಂದರೆ ಸರಿ. ಸದರಿ ಜಮೀನನ್ನು ನಾವು 15-20 ವರ್ಷಗಳ ಹಿಂದೆ ನೀರಾವರಿ ಜಮೀನಾಗಿ ಪರಿವರ್ತಿಸಿರುತ್ತೇವೆ, ನಾನು ಸರ್ವೆ ನಂ 8 ಮತ್ತು 9 ರಲ್ಲಿನ ಜಮೀನನ್ನು ತೋಟದ ಜಮೀನಾಗಿ ಮಾಡಿರುತ್ತೇನೆ. ಸರ್ವೆ ನಂ 9ರ ಪಕ್ಕದಲ್ಲಿರುವ ಜಮೀನಿನಲ್ಲಿ ರಸ್ತೆ ಓಡಾಡಲು ಬಿಟ್ಟುಕೊಟ್ಟಿರತ್ತಾರೆ.

ಸರ್ವೆ ನಂ 9ರ ಪಶ್ಚಿಮ ಭಾಗಕ್ಕೆ ಸರ್ವೆ ನಂ 5 ರ ಜಮೀನು ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಶ್ಚಿಮ ಮತ್ತು ಉತ್ತರ ಎರಡೂ ದಿಕ್ಕಿಗೂ ಬರುತ್ತದೆ ಎಂದು

ನುಡಿಯುತ್ತಾರೆ. ಸರ್ವೆ ನಂ 7,8,9,12,13 ರಲ್ಲಿ ನಕಾಶೆ ಕಂಡ ದಾರಿ ಇದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಸದರಿ ಸರ್ವೆ ನಂಬರುಗಳಲ್ಲಿರುವ ದಾರಿ ನನಗೆ ಬುದ್ದಿ ಬಂದಾಗಿನಿಂದಲೂ ಸಹ ಸಾಗುವಳಿ ಜಮೀನಾಗಿ ಪರಿವರ್ತಿಸಲ್ಪಟ್ಟಿದೆ ಎಂದರೆ ಸರಿ. ವಾದಿ ಅನುಭವದಲ್ಲಿರುವ ಜಮೀನು ವಾದಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. 1 ಮತ್ತು 3 ನೇ ಪ್ರತಿವಾದಿಯನ್ನು ಹೊರತುಪಡಿಸಿ 4 ಮತ್ತು 5 ನೇ ಪ್ರತಿವಾದಿ ಸರ್ವೆ ನಂ 13 ರ ಸಾಗುವಳಿದಾರರು ಎಂದರೆ ಸರಿ. ವಾದಿ ಸದರಿ ವೀರಭದರಪ್ಪ ಮತುತ ಶರಣಪ್ಪರವರ್‌ನ ಸಹ ಪ್ರತಿವಾದಿಗಳಾಗಿ ತೋರಿಸಿದ್ದಾರೆ ಎಂದರೆ ಸರಿ. ಸದರಿ 4 ಮತ್ತು 5 ನೇ ಪ್ರತಿವಾದಿಗಳು ಸರ್ವೆ ನಂ 13 ರಲ್ಲರುವಂತಹ ನಕಾಶೆ ಕಂಡ ದಾರಿಯನ್ನು ಸೇರಿಸಿ ಸಾಗು ಮಾಡುತ್ತಿದ್ದ್ರೆ ಎಂದರೆ ಸ ರಿ.

ಸರ್ವೆ ನಂ 7 ರ ಜಮೀನು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರಿನಲ್ಲಿರುವ ನಕಾಶೆ ಕಂಡ ದಾರಿಯು ಸಹ ಸಾಗುವಳಿಯಾಗಿ ಪರಿವರ್ತಿಸಲಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ 13 ರ ಪೂರ್ವದಲ್ಲಿರುವ ಸರ್ವೆ ನ 14 ರ ಜಮೀನು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ 14,16,1 ಮತ್ತು 2 ರ ಜಮೀನುಗಳು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ 5ರ ಉತ್ತರದ ಪಶ್ಚಿಮ ಭಾಗಕ್ಕೆ ಸರ್ವೆ ನಂ 3 ಮತ್ತು 4 ರ ಜಮೀನು ಬರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರಿನ ಸಾಗುವಳಿದಾರರು ಯಾವುದರ ಮೂಲಕ ಓಡಾಡುತ್ತಾರೆ ಎಂದರೆ ಸಾಕ್ಷಿ ಹಳ್ಳದ ಕಾಲುವೆ ಪಕ್ಕದಲ್ಲಿರುವ ರಸ್ತೆಯಲ್ಲಿ ಓಡಾಡುತ್ತಾರೆ ಎಂದು ನುಡಿಯುತ್ತಾರೆ, ಸದರಿ ರಸ್ತೆ ನಕಾಶೆಯಲ್ಲಿರುವ ಕುರಿತು ನನಗೆ ಗೊತ್ತಿಲ್ಲ.

ನಕಾಶೆ ಕಂಡ ದಾರಿ ಮುಚ್ಚಿ ಹೋಗಿರುವುದನ್ನು ವಾದಿ 21-01-2018 ರಂದು ಜೆ ಸಿ ಬಿ ಬಳಸಿ ಖುಲ್ಲಾ ಮಾಡಲು ಪ್ರಯತ್ನಿಸಿದರು ಎಂದರೆ ಸರಿ. ಸಾಕ್ಷಿ ಮುಂದುವರೆದು ತಹಶೀಲ್ದಾರ್ ರವರ ಆದೇಶದಂತೆ ಖುಲ್ಲಾ ಮಾಡಲು ಪ್ರಯತ್ನಿಸಿದರು ಎಂದು ನುಡಿಯುತ್ತಾರೆ. ಸದರಿ ತಹಶೀಲ್ದಾರ್‌ರವರು ವಾದಿಗೆ ಸದರಿ ದಾರಿಯನ್ನುಖುಲ್ಲಾ ಮಾಡಲು ಆದೇಶಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ.

ಸರ್ವೆ ನಂ 5 ರ ಜಮೀನಿಗೆ ಚಿರಡೋಣಿ ಮತ್ತು ದೊಡ್ಡಘಟ್ಟ ರಸ್ತೆಯಿಂದ ಸರ್ವೆ ನಂ 5 ಕ್ಕೆ ಬಂದು ಅಲ್ಲಿಂದ ಸರ್ವೆ ನಂ 13 ರ ಜಮೀನಿಗೆ ತಲುಪುತ್ತಾರೆ ಎಂದರೆ ಸಾಕ್ಷಿ ಸದರಿ ರಸ್ತೆ ಹೆದ್ದಾರಿಯಾದ ಕಾರಣ ವ್ಯವಸಾಯಕ್ಕೆ ಓಡಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ಸದರಿ ಸರ್ವೆ ನಂ 13 ರಲ್ಲಿ ಹಾದು ಹೋಗಿರುವ ನಕಾಶೆ ಕಂಡ ದಾರಿ ಈಗಗಲೇ ಮುಚ್ಚಿ ಹೋಗಿದ್ದು ಅದನ್ನು ಖುಲ್ಲಾ ಮಾಡಲು ವಾದಿಯನ್ನು ಹೊರತುಪಡಿಸಿ ಬೇರೆ ಯಾವುದೇ ಸರ್ವೆ ನಂಬರಿನ ಸಾಗುವಳಿದಾರರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ.

ನನ್ನ ಜಮೀನು ಸರ್ವೆ ನಂ 12 ರಲ್ಲಿದೆ. ಸರ್ವೆ ನಂ 7 ಮತ್ತು 9 ರಲ್ಲಿರುವ ನಕಾಶೆ ಕಂಡ ದಾರಿಯೇ ಮುಚ್ಚಿ ಹೋಗಿದೆ ಎಂದರೆ ಸಕ್ಷಿ ಸರ್ವೆ ನಂ 7ರಲ್ಲಿದೆ ಎಂದು ನುಡಿಯುತ್ತಾರೆ, ನಾನು ನನ್ನ ಜಮೀನಿಗೆ ಬರಲು ಸರ್ವೆ ನಂ 8 ಮತ್ತು 9 ರ ಜಮೀನುಗಳ ಮೂಲಕವೇ ಬರಬೇಕು ಎಂದರೆ ಸರಿ. ಸರ್ವೆ ನಂ 9 ರಲ್ಲಿನ ನಕಾಶೆ ಕಂಡ ದಾರಿ ಮುಚ್ಚಿ ಹೋದ ಬಗ್ಗೆ ಮತ್ತು ಅದನ್ನು ತೆರವುಗೊಳಿಸುವ ಕುರಿತು ನಾನು ಯಾವುದೇ ಅರ್ಜಿಯನ್ನು ಕೊಟ್ಟಿಲ್ಲ ಸಾಕ್ಷಿ ಮುಂದುವರೆದು ವಾದಿಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ವಾದಿಗೆ ಸದರಿ ವಿಚಾರದ ಕುರಿತು ಯಾವುದೇ ಅಧಿಕಾರ ಪತ್ರವನ್ನಾಗಲಿ ಅಥವಾ ಮುಖ್ತೆಯಾರ್ ನಾಮೆಯನ್ನಾಗಲಿ ಕೊಟ್ಟಿಲ್ಲ,

ಸದರಿ ದಾರಿ ನನಗೆ ಬುದ್ದಿ ಬಂದಾಗಿನಿಂದ ಮುಚ್ಚಿ ಹೋದ ಕಾರಣದಿಂದಲೇ ಸದರಿ ದಾರಿಯ ಕುರಿತು ನಾನು ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-15 ರ ನಕಾಶೆಯ ಕುರಿತು ನನಗೆ ಗೊತ್ತಿದೆ. ಸದರಿ ನಿಪಿ-15 ರಲ್ಲಿ ನಕಾಶೆ ಕಡ ದಾರಿಯನ್ನು ಯಾವ ಸರ್ವೆ ನಂಬರಿನ ಹಿಡುವಳಿದಾರರು ಒತ್ತುವರಿ ಮಾಡಿರುತ್ತಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ವಾದಿ ಸದರಿ ನಿಪಿ-15 ರಲ್ಲಿ ನಮೂದಾದ ಎಲ್ಲಾ ಒತ್ತುವರಿದಾರರನ್ನು ಸೇರಿಸಿ ಈ ದಾವೆ ಹೂಡಿಲ್ಲ ಎಂದರೆ ಸರಿ. ನನಗೆ ಪ್ರಸ್ತುತ ದಾವೆಯ

ಕುರಿತು ಯಾವುದೇ ಮಾಹಿತಿ ಇಲ್ಲದೆ ಸದ್ದರು ಸಹ ವಾದಿ ನನ್ನ ದಾಯಾದಿ ಸಂಬಂಧಿಯಾದ ಕಾರಣ ಆತನ ಪರವಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.